4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

ಎಸ್.ಸಿ. ನಂಃ 5033/2019

**(ದಿನಾಂಕಃ 28-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ವಿಜಯಕುಮಾರ್ ಪಿ.ಡಬ್ಲ್ಯೂ 03.
ತಂದೆಯ ಹೆಸರುಃ ನಾಗರಾಜು ಸಿ.ಡಬ್ಲ್ಯೂ 07.
ವಯಸ್ಸುಃ 23 ವರ್ಷ
ಉದ್ಯೋಗಃ ಮ್ಯಾನೇಜರ್
ವಾಸಃ ಚನ್ನರಾಯಪಟ್ಟಣ.

**ಮುಖ್ಯ ವಿಚಾರಣೆಃ** ಸರ್ಕಾರಿ ಅಭಿಯೋಜಕರಿಂದಃ

ನಾನು ಚನ್ನರಾಯಪಟ್ಟಣದ ಕೃತಿಕಾ ಲಾಡ್ಜ್ ನಲ್ಲಿ ಕಳೆದ 2 ವರ್ಷಗಳ ಹಿಂದೆ ಸುಮಾರು 2 ವರ್ಷಗಳ ಕಾಲ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದೇನೆ. ಚಾಸಾ-8 ಮತ್ತು 9 ನನ್ನೊಂದಿಗೆ ಅದೇ ಲಾಡ್ಜ್ ನಲ್ಲಿ ಕೆಲಸ ಮಾಡಿಕೊಂಡಿದ್ದರು. ನಾನು ಲಾಡ್ಜ್ ನಲ್ಲಿ ಒಂದು ಪುಸ್ತಕವನ್ನು ಇಟ್ಟಿದ್ದೇನೆ.

ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನಾನು ಸದರಿ ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಬಂದಿದ್ದ ಬಗ್ಗೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ಒಂದು ಪುಸ್ತಕವನ್ನು ತೋರಿಸಲಾಗಿ, ಅದನ್ನು ತಾನು ಸದರಿ ಲಾಡ್ಜ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಇಟ್ಟಿದ್ದಾಗಿ ನುಡಿಯುತ್ತಾರೆ. ಸದರಿ ಪುಸ್ತಕವನ್ನು ಈಗಾಗಲೆ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ನಿಪಿ-3(ಎ) ಮತ್ತು (ಬಿ) ಎಂದು ಗುರುತಿಸಲಾದ ಬರವಣಿಗೆಯನ್ನು ತಾನು ಕರ್ತವ್ಯದಲ್ಲಿದ್ದಾಗ ಲಾಡ್ಜ್ ಗೆ

ಬಂದ ಕಾರ್ ಡ್ರೈವರ್ ರಂಗನಾಥ ಎನ್ನುವವರು ನಿಪಿ-3(ಎ) ಮತ್ತು (ಬಿ) ನೇದ್ದರ ಮಾಹಿತಿಯನ್ನು ದಾಖಲಿಸಿದ್ದಾಗಿ ನುಡಿಯುತ್ತಾರೆ. ಸದರಿ ದಾಖಲೆ ಪ್ರಕಾರ ಆ ದಿನ ರೂಂ ನಂಬರ್ 130 ರಲ್ಲಿ ಒಂದು ಹುಡುಗ ಮತ್ತು ಹುಡುಗಿ ಇದ್ದರು, ರೂಂ ನಂಬರ್ 128 ರಲ್ಲಿ ಒಬ್ಬ ಹುಡುಗ ಮಾತ್ರ ಇದ್ದ ಎಂದು ನುಡಿಯುತ್ತಾರೆ ಅವರನ್ನು ಹುಡುಕಿಕೊಂಡು ಬೆಳಗಿನ ಜಾವ 5-00 ಗಂಟೆ ಸುಮಾರಿಗೆ ಯಾರೋ ಇಬ್ಬರು ವ್ಯಕ್ತಿಗಳು ಲಾಡ್ಜ್ ಗೆ ಬಂದು, ಲಾಡ್ಜ್ ನಲ್ಲಿದ್ದ ಹುಡುಗ ಮತ್ತು ಹುಡುಗಿಯ ಫೋಟೋ ತೋರಿಸಿ ಅವರು ನಮ್ಮ ಸಂಬಂಧಿಕರು ಎಂದು ವಿಚಾರಿಸಿದಾಗ, ನಾನು ಅವರು ತಂಗಿದ್ದ ರೂಮನ್ನು ತೋರಿಸಿದೆ. ನಂತರ ಏನಾಯಿತು ಎಂದು ನನಗೆ ಮಾಹಿತಿ ಇಲ್ಲ.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ತನ್ನ ಸಹಿ ಗುರುತಿಸಲು ಕೋರಲಾಗಿ, ಸಾಕ್ಷಿಯು ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲೆಯು 6, 9 ಮತ್ತು 11 ನೇ ಆರೋಪಿತರು ತೋರಿಸಿದ ಸ್ಥಳದ ಪಂಚನಾಮೆ ಆಗಿದ್ದು, ಅದನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಿ ತನ್ನ ಸಹಿ ಗುರುತಿಸಲು ಕೋರಲಾಗಿ, ಸಾಕ್ಷಿಯು ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲೆಯು ಅಮಾನತ್ತು ಪಂಚನಾಮೆ ಆಗಿದ್ದು, ಅದನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಗಳನ್ನು ಈಗ್ಗೆ 2 ವರ್ಷಗಳ ಹಿಂದೆ ಪೋಲಿಸರು ಚನ್ನರಾಯಪಟ್ಟಣದ ಕೃತಿಕಾ ಲಾಡ್ಜ್ ಗೆ ಬಂದಾಗ ಮಾಡಿದ್ದೇನೆ. ಪೋಲಿಸರು ವಿಚಾರಣೆ ಮಾಡಿದಾಗ 3 ಜನರು ಎರಡು ಪ್ರತ್ಯೇಕ ಕೋಣೆಗಳಲ್ಲಿ ಮೊದಲು 3 ದಿನಗಳ ಕಾಲ ಇದ್ದು, ನಂತರ ಮತ್ತೆ ಬಂದು ಅದೇ ರೂಮ್ ಗಳಲ್ಲಿ ಇದ್ದ ಬಗ್ಗೆ ತಿಳಿಸಿದೆನು. ಆ ಕಾಲಕ್ಕೆ ನನ್ನ ಸಮಕ್ಷಮ ಒಂದು ಸ್ವಿಫ್ಟ್ ಕಾರನ್ನು ಅಮಾನತ್ತುಪಡಿಸಿಕೊಂಡರು.

ಸಾಕ್ಷಿಗೆ ನಿಪಿ-4 ರ ಪಂಚನಾಮೆಯಲ್ಲಿ ಇರುವ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ಪಂಚನಾಮೆ ಕಾಲಕ್ಕೆ ತೆಗೆದಿದ್ದಾಗಿ ಒಪ್ಪಿಕೊಂಡು ತನ್ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಸದರಿ ಎರಡು ಛಾಯಾಚಿತ್ರಗಳನ್ನು ಅನುಕ್ರಮವಾಗಿ ನಿಪಿ4(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಭಾವಚಿತ್ರಗಳನ್ನು ಅನುಕ್ರಮವವಾಗಿ ನಿಪಿ4(ಬಿ)(1) ಮತ್ತು (ಸಿ)(1) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-5 ರ ಪಂಚನಾಮೆಯಲ್ಲಿ ಇರುವ ಒಂದು ಛಾಯಾಚಿತ್ರವನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಪಂಚನಾಮೆ ಕಾಲಕ್ಕೆ ತೆಗೆದಿದ್ದಾಗಿ ಒಪ್ಪಿಕೊಂಡು ತನ್ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಸದರಿ ಒಂದು ಛಾಯಾಚಿತ್ರವನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಭಾವಚಿತ್ರವನ್ನು ನಿಪಿ-5(ಬಿ)(1) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-5(ಬಿ) ನಲ್ಲಿರುವ ಕಾರಿನ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಛಾಯಾಚಿತ್ರಗಳಲ್ಲಿರುವ ಬೇರೆ ವ್ಯಕ್ತಿಗಳನ್ನು ನ್ಯಾಯಾಲಯದಲ್ಲಿರುವ ಆರೋಪಿತರ ಪೈಕಿ ಯಾರು ಎಂದು ತನಗೆ ಗುರುತಿಸಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಕಾರನ್ನು ಬಿಟ್ಟು ಬೇರೆ ಯಾವುದೇ ವಸ್ತುವನ್ನು ಅಲ್ಲಿಂದ ಅಮಾನತ್ತುಪಡಿಸಿಕೊಳ್ಳಲಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ಹೇಳಿಕೆ ನೀಡಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ 06-01-2019 ನೇದ್ದಕ್ಕೆ 2-3 ದಿನಗಳ ಹಿಂದೆ ಇಬ್ಬರು ಹುಡುಗರು ಹಾಗೂ ಒಂದು ಹುಡುಗಿ ಚನ್ನರಾಯಪಟ್ಟಣದ ಕೃತಿಕಾ ಲಾಡ್ಜ್ ಗೆ ರೂಮ್ ಕೇಳಿಕೊಂಡು ಬಂದಿದ್ದರು ಎಂದರೆ ಸರಿ. ವಿಳಾಸದ ದಾಖಲೆ ಪರಿಶೀಲಿಸಿ ರೂ. 900-00 ಗಳ ಬಾಡಿಗೆ ಮಾತನಾಡಿ ರೂ. 4000/- ಗಳ ಮುಂಗಡ ಹಣ ಪಡೆದು, ಎರಡು ರೂಮ್ ಗಳನ್ನು ಬಾಡಿಗೆಗೆ ಕೊಟ್ಟೆ ಎಂದರೆ ಸರಿ. ಒಂದು ರೂಮಿನಲ್ಲಿ ಹುಡುಗ ಹುಡುಗಿ ಹಾಗೂ ಇನ್ನೊಂದು ರೂಮಿನಲ್ಲಿ ಹುಡುಗ ಇದ್ದರು ಎಂದರೆ ಸರಿ. ದಿನಾಂಕಃ 06-01-2019 ರಂದು ಬೆಳಿಗ್ಗೆ ರೂಮ್ ಕಾಲಿ ಮಾಡಿಕೊಂಡುಹೋಗಿ ಅದೇ ದಿನ ಸಂಜೆ 6-15 ಗಂಟೆಗೆ ವಾಪಸ್ಸು ನಮ್ಮ ಲಾಡ್ಜ್ ಗೆ ಬಂದು ರೂಮ್ ಪಡೆದುಕೊಂಡರು ಎಂದರೆ ಸರಿ.

ಈ ನಡುವೆ ದಿನಾಂಕಃ 05-01-2019 ರಂದು ರೂಮ್ ಪಡೆದಿದ್ದ ರಂಗನಾಥ ಎಂಬ ಕಾರು ಚಾಲಕ ನನ್ನ ಬಳಿಗೆ ಬಂದು ಆತನ ಫೋನ್ ಸ್ವಿಚ್ ಆಫ್ ಆಗಿದೆ ಎಂದು ಪತ್ನಿಯೊಂದಿಗೆ ಮಾತನಾಡಲು ನನ್ನ ಫೋನ್ ಇಸಿದುಕೊಂಡು 5-6 ನಿಮಿಷ ಮಾತನಾಡಿ ವಾಪಸ್ಸು ಕೊಟ್ಟ ಎಂದರೆ ಸರಿ. ಆತ ಕಾಲ್ ಮಾಡಿದ ನಂಬರ್ ಡಿಲೀಟ್ ಮಾಡಿದ್ದು, ನಾನು ಕೇಳಿದ್ದಕ್ಕೆ ಲೇಡಿಸ್ ನಂಬರ್ ಅಲ್ವಾ ಅಣ್ಣಾ ಅದಕ್ಕೆ ಡಿಲೀಟ್ ಮಾಡಿದೆ ಎಂದರು ಅಂದರೆ ಸರಿ.

ದಿನಾಂಕಃ 07-01-2019 ರಂದು ಬೆಳಗ್ಗಿನ ಜಾವ 3-00 ಗಂಟೆ ಸಮಯದಲ್ಲಿ ನಾನು ರಿಸೆಪ್ಷನಿಸ್ಟ್ ಜಾಗದಲ್ಲಿದ್ದಾಗ, ಬೆಂಗಳೂರಿನ ಧರಣಿ ಮತ್ತು ಬಸವರಾಜು ಎಂಬುವವರು ಬಂದರು, ಅವರ ಜೊತೆ ಸುಮಾರು 9 ಹುಡುಗರು ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು 4-5 ಜನ ಬಂದಿದ್ದರು ಅವರ ಹೆಸರು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅವರು ನನ್ನ ಮನೆಯ ವಿಳಾಸವನ್ನೆಲ್ಲಾ ಹೇಳುತ್ತಾ ನನ್ನ ಮನೆಗೆ ಹೋಗಿ ಬಂದೆವು ಎಂದು ತಿಳಿಸಿದರು ಎಂದರೆ ಸರಿ. ಆಗ ನನ್ನ ಫೋನ್ ನಿಂದ ಮಾತನಾಡಿದ ವ್ಯಕ್ತಿ ಲಾಡ್ಜ್ ನಲ್ಲಿ ಇದ್ದಾರಾ ಎಂದು ಕೇಳಿದರು ಎಂದರೆ ಸರಿ. ಆಗ ನನಗೆ ನಾನು ರಂಗನಾಥನಿಗೆ ಫೋನ್ ಕೊಟ್ಟ ವಿಚಾರ ಮರೆತು

ಹೋಗಿದ್ದರಿಂದ ತಡವರಿಸುತ್ತಿದ್ದೆ ಎಂದರೆ ಸರಿ. ಆಗ ಒಂದು ಹುಡುಗ-ಹುಡುಗಿ ಫೋಟೋ ತೋರಿಸಿ, ಅವರು ಲಾಡ್ಜ್ ನಲ್ಲಿ ಇದ್ದಾರಾ ಎಂದು ಕೇಳಿದರು ಎಂದರೆ ಸರಿ. ಆಗ ನಾನು ಫೋಟೋ ನೋಡಲಾಗಿ, ಅವರು ನಮ್ಮ ಲಾಡ್ಜಿನ ರೂಮ್ ನಂ: 126 ನೇದ್ದರಲ್ಲಿದ್ದ ಹುಡುಗ-ಹುಡುಗಿ ಆಗಿದ್ದರು ಎಂದರೆ ಸರಿ. ಮೊದಲಿಗೆ ನಾನು ಅವರಿಗೆ ಹೇಳಲಿಲ್ಲ, ಆಮೇಲೆ ಅವರು ನನ್ನ ಮಗಳು ಮತ್ತು ಅಳಿಯ ಮನೆಯಿಂದ ಮುನಿಸಿಕೊಂಡು ಬಂದಿದ್ದಾರೆ, ದಯಮಾಡಿ ಹೇಳಿ ಎಂದು ಗೋಗರೆದರು ಎಂದರೆ ಸರಿ. ಆಗ ನಾನು ಅವರು ರೂಮ್ ನಂ: 126 ರಲ್ಲಿ ಇದ್ದಾರೆ ಎಂದು ಹೇಳಿದೆ ಎಂದರೆ ಸರಿ. ಆಗ ಅವರು ಸೀದಾ ರೂಮ್ ನಂ: 126ರ ಹತ್ತಿರ ನನ್ನನ್ನು ಕರೆದುಕೊಂಡು ಹೋಗಿ ನಮ್ಮ ಮೂಲಕ ಬಾಗಿಲು ತೆಗೆಸಿದರು ಎಂದರೆ ಸರಿ. ಅದರಲ್ಲಿದ್ದ ಮನು ಮತ್ತು ಪಲ್ಲವಿ ಅಲಿಯಾಸ್ ಪ್ರಿಯಾಂಕ ರವರನ್ನು ಹೊರಗಡೆ ಎಳೆದುಕೊಂಡರು ಎಂದರೆ ಸರಿ. ಆ ಹುಡುಗಿಗೆ ಅವರಲ್ಲಿದ್ದ ಯಜಮಾನರೊಬ್ಬರು ಒಂದು ಏಟು ಹೊಡೆದರು ಎಂದರೆ ಸರಿ. ಬಳಿಕ ಮನುರವರಿಗೆ ಅಲ್ಲಿದ್ದವರೆಲ್ಲಾ ಬಾಯಿ ಮತ್ತು ಮೂಗಿನಲ್ಲಿ ರಕ್ತ ಬರುವಂತೆ ಕೈಗಳಿಂದ ಹೊಡೆದರು ಎಂಬ ಪ್ರಶ್ನೆಗೆ ಸಾಕ್ಷಿಯು ಹೊಡೆದರು ಆದರೆ ರಕ್ತ ಬರುವುದನ್ನು ನಾನು ಗಮನಿಸಲಿಲ್ಲ ಎಂದು ನುಡಿಯುತ್ತಾರೆ. ಬಳಿಕ, ಮನುರವರನ್ನು ಟವಲ್ ನಿಂದ ಕಟ್ಟಿ ಎಳೆದುಕೊಂಡು ಹೋದರು ಎಂಬ ಪ್ರಶ್ನೆಗೆ ಸಾಕ್ಷಿಯು ಮಾಮೂಲಿಯಾಗಿಯೇ ಹಿಡಿದುಕೊಂಡು ಹೋದರು ಎಂದು ನುಡಿಯುತ್ತಾರೆ. ಅಲ್ಲಿ ಬಂದವರೆಲ್ಲಾ ಒಬ್ಬರಿಗೊಬ್ಬರು ಧರಣಿ, ಬಸಣ್ಣ, ಕಿರಣ್, ಅರುಣ್, ಅನಿ, ಚೇತನ್, ಕುಮಾರ್, ಚಂದ್ರ, ಬೋಡಿ, ಬುಡ್ಡ, ಮಂಜ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರುಗಳು ತಾವು ತಂದಿದ್ದ ನೀಲಿ ಬಣ್ಣದ ಸ್ವಿಫ್ಟ್ ಡಿಸೈರ್ ಕಾರು, ಬಿಳಿ ಬಣ್ಣದ ಫಾರ್ಚುನರ್ ಕಾರು ಹಾಗೂ ಸಿಲ್ವರ್ ಕಲರ್ ಇನೋವಾ ಕಾರಿನಲ್ಲಿ ಹೋದರು ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಎರಡು ಕಾರುಗಳನ್ನು ತಂದಿದ್ದರು ಎಂದು ನುಡಿಯುತ್ತಾರೆ. ಅವರು ಮನು ಮತ್ತು ಪಲ್ಲವಿ ರವರನ್ನು ಕೆಳಗೆ ಕರೆದುಕೊಂಡು ಹೋದವರೇ ಅಲ್ಲಿ ಕೆಳಗೆ ಮನು ನಿಲ್ಲಿಸಿದ ಕೆಂಪು ಬಣ್ಣದ ಕಾರಿನ ಗಾಜುಗಳನ್ನು ಹೊಡೆದು ಹಾಕಿ ಹೊರಟು ಹೋದರು ಎಂದರೆ ಸರಿ.

ಅವರೆಲ್ಲಾ ಹೋದ ಬಳಿಕ ರೂಮ್ ನಂಬರ್ಃ 127 ನೇದ್ದರಲ್ಲಿದ್ದ ಹುಡುಗ ರಂಗನಾಥ ನಮ್ಮ ಲಾಡ್ಜ್ ನ ರೂಮ್ ಬಾಯ್ ಲೋಕೇಶನನ್ನು ಮಾತನಾಡಿಸಿ ವಿಚಾರ ಕೇಳಿಕೊಂಡು ಅಲ್ಲಿಂದ ಹೊರಟು ಹೋದ ಎಂದರೆ ಸರಿ.

ನಂತರ ವಿಚಾರಿಸಲಾಗಿ, ಲಾಡ್ಜ್ ನಲ್ಲಿದ್ದ ಹುಡುಗಿ ಬೆಂಗಳೂರಿನ ಕಾಮಾಕ್ಷಿ ಪಾಳ್ಯದ ವಾಸಿ ಬಸವರಾಜು ರವರ ಮಗಳು ಪಲ್ಲವಿ ಹಾಗೂ ಮನು ಅವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಎಂದು ತಿಳಿಯಿತು ಎಂದರೆ ಸರಿ. ಮನು ಪಲ್ಲವಿರವರೊಂದಿಗೆ ಸುಮಾರು 2 ರಿಂದ 2.5 ತಿಂಗಳು ಅಲ್ಲಿ-ಇಲ್ಲಿ ಸುತ್ತಾಡಿದ್ದರಿಂದ ಆತನನ್ನು ಆರೋಪಿತರೆಲ್ಲಾ ಲಾಡ್ಜ್ ನಿಂದ ಕರೆದುಕೊಂಡು ಹೋಗಿ ದಿನಾಂಕಃ 07-01-2019 ರಂದು ಮಧ್ಯರಾತ್ರಿ ಕೊರಟಗೆರೆ ಬಳಿಯ ಜೆಟ್ಟಿ ಅಗ್ರಹಾರ ಸಮೀಪ ಕೊಲೆ ಮಾಡಿದ್ದಾಗಿ ತಿಳಿಯಿತು ಎಂದರೆ ಸರಿ.

ನಂತರ, ದಿನಾಂಕಃ 18-01-2019 ರಂದು ಕೊರಟಗೆರೆ ಪೋಲಿಸರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 6, 9 ಮತ್ತು 11 ನೇ ಆರೋಪಿತರನ್ನು ನಮ್ಮ ಲಾಡ್ಜ್ ಗೆ ಕರೆದುಕೊಂಡು ಬಂದು ಮಹಜರು ಮಾಡಿದರು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅವರನ್ನು ಗುರುತಿಸಿಲ್ಲ ಎಂದು ನುಡಿಯುತ್ತಾರೆ. ಆ ಕಾಲಕ್ಕೆ ದಿನಾಂಕಃ 07-01-2019 ರಂದು ಬೆಳಗಿನ ಜಾವ ಲಾಡ್ಜ್ ಗೆ ಬಂದು ಮನು ಮತ್ತು ಪಲ್ಲವಿ ರವರನ್ನು ಕರೆದುಕೊಂಡು ಹೋದ ಎಲ್ಲರನ್ನು ನಾನು ನೋಡಿದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ದಿನಾಂಕಃ 08-03-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ ನಂತರ *"ದಿಃ 07-01-2019 ರಂದು .............. ಹುಡುಗರಿದ್ದರು"'* *ಹಾಗೂ "ಬಾಯಿ ಮತ್ತು ಮೂಗಿನಲ್ಲಿ ..........ಎಂತ ಮಾತನಾಡಿಕೊಳ್ಳುತ್ತಿದ್ದರು"* *ಮತ್ತು "ದಿಃ18-01-2019 ರಂದು ...... ನುಡಿಯುತ್ತಿದ್ದೇನೆ"* ಎಂಬುದಾಗಿ ಹೇಳಿಕೆ

ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗಗಳನ್ನು ಅನುಕ್ರಮವಾಗಿ ನಿಪಿ-6, 6(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 18-01-2019 ರಂದು ಬೆಳಿಗ್ಗೆ 11-00 ರಿಂದ 12-00 ಗಂಟೆಯವರೆಗೆ ಕೊರಟಗೆರೆ ಪೋಲಿಸರು ತಮ್ಮ ವಶದಲ್ಲಿದ್ದ ಆರೋಪಿತರಾದ ಬಸವರಾಜು, ಕುಮಾರ, ಪುರುಶೋತ್ತಮ ರವರನ್ನು ಚನ್ನರಾಯಪಟ್ಟಣದ ನಮ್ಮ ಲಾಡ್ಜ್‌ಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಅವರು ದಿನಾಂಕಃ 07-01-2019 ರಂದು ಬೆಳಗಿನ ಜಾವ 4-00 ಗಂಟೆ ಸುಮಾರಿಗೆ ಮನು ಹಾಗೂ ಪಲ್ಲವಿ ರವರನ್ನು ಕರೆದುಕೊಂಡು ಹೋದ ಸ್ಥಳ ಇದೇ ಎಂದು ರೂಮ್ ನಂಃ 126 ತೋರಿಸಿದರು ಎಂದರೆ ಸರಿ. ಸದರಿ ಲಾಡ್ಜ್ ನಲ್ಲಿ ಬಂದು ತಂಗುವ ವ್ಯಕ್ತಿಗಳ ಹೆಸರುಗಳನ್ನು ಪುಸ್ತಕದಲ್ಲಿ ದಾಖಲಿಸುತ್ತೇವೆ ಎಂದು ಹೇಳಿ ನಿಪಿ-3 ದಾಖಲೆಯನ್ನು ಹಾಜರುಪಡಿಸಿದೆ ಎಂದರೆ ಸರಿ. ಸದರಿರವರು ವಾಸವಿದ್ದ ಬಗ್ಗೆ ಪುಟ ಸಂಃ 26 ಮತ್ತು 28 ನೇದ್ದವುಗಳಲ್ಲಿ ದಾಖಲಿರುವ ಮಾಹಿತಿಯನ್ನು ತೋರಿಸಿದೆ ಎಂದರೆ ಸರಿ. ಆ ಕಾಲಕ್ಕೆ ನಿಪಿ-4 ರಂತೆ ಪಂಚನಾಮೆ ತಯಾರಿಸಿ ರೂಮ್ ನಂಃ 127 ರಲ್ಲಿದ್ದ ಕರೆಂಟ್ ಪ್ಲಗ್‌ಗೆ ಪ್ರಿಂಟರ್ ಅಳವಡಿಸಿ, ಪ್ರಿಂಟ್ ತೆಗೆದು ನನ್ನ ಸಹಿ ಪಡೆದರು ಎಂದರೆ ಸರಿ.

ಅದೇ ದಿನ ಮಧ್ಯಾಹ್ನ 12-30 ರಿಂದ 1-15 ಗಂಟೆಯವರೆಗೆ ಲಾಡ್ಜ್ ನ ಮುಂಭಾಗದಲ್ಲಿದ್ದ ಮನು ರವರಿಗೆ ಸೇರಿದ ಕೆ.ಎ.03-ಎಂ.ಜಿ-0167 ಮಾರುತಿ ಸುಜುಕಿ ಸ್ವಿಫ್ಟ್ ಕಾರನ್ನು ನೋಡಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಸದರಿ ಕಾರಿನ ಡಿಕ್ಕಿಯಲ್ಲಿ ಒಂದು ಲೆಗ್ಗಿನ್ ಹಾಗೂ ಟಾಪ್ ಇದ್ದವು. ಅವುಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಸದರಿ ಲೆಗ್ಗಿನ್ ಹಾಗೂ ಟಾಪ್ ನನಗೆ ತೋರಿಸಿದ ವಸ್ತುಗಳು ಎಂದರೆ ಸರಿ. ಸದರಿ ಎರಡು ವಸ್ತುಗಳನ್ನು ಅನುಕ್ರಮವಾಗಿ ಮು.ಮಾ-3 ಮತ್ತು 4 ಎಂದು ಗುರುತಿಸಲಾಯಿತು.

ಆ ದಿನ ಸ್ಥಳದಲ್ಲಿ ಹಾಜರಿದ್ದ 6, 9 ಮತ್ತು 11 ನೇ ಆರೋಪಿತರಾದ ಬಸವರಾಜು, ಕುಮಾರ ಮತ್ತು ಪುರುಶೋತ್ತಮ್ ರವರೇ ನಿಪಿ-4(ಬಿ) ಮತ್ತು (ಸಿ) ನೇದ್ದರ

ಛಾಯಾಚಿತ್ರಗಳಲ್ಲಿರುವ ವ್ಯಕ್ತಿಗಳು ಎಂದರೆ ಸರಿ. ಸದರಿ ಮೂವರ ಭಾವಚಿತ್ರಗಳನ್ನು ಅನುಕ್ರಮವಾಗಿ ನಿಪಿ4(ಡಿ),(ಇ),(ಎಫ್) ಎಂದು ಗುರುತಿಸಲಾಯಿತು.

ಆ ದಿನ ಲಾಡ್ಜ್‌ಗೆ ಬಂದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳಾಗಿದ್ದರೂ ಸಹ ಅವರಿಗೆ ಸಹಾಯ ಮಾಡಲು ಗುರುತಿಸಲು ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃ**

ನಮ್ಮ ಲಾಡ್ಜ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಆಡಿಟ್ ಮಾಡುತ್ತಾರೆ ಎಂದರೆ ಸರಿ. ಅವರು ಪರಿಶೀಲನೆ ಮಾಡಿದಾಗ ಇಷ್ಟು ಪುಟದಿಂದ ಇಷ್ಟು ಪುಟದವರೆಗೆ ಪರಿಶೀಲನೆ ಮಾಡಿದ್ದಾಗಿ ಸೀಲು ಹಾಕಿ ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ-3 ದಾಖಲೆಯಲ್ಲಿ ಆ ರೀತಿ ಸಿ.ಟಿ.ಒ ಪರೀಶಿಲನೆ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ-3 ದಾಖಲೆಯಲ್ಲಿ ದಿನಾಂಕಃ 18-01 ರವರೆಗೆ ನಮ್ಮ ಲಾಡ್ಜ್‌ನಲ್ಲಿ ದಾಖಲಾದ ವ್ಯಕ್ತಿಗಳ ನಮೂದುಗಳು ಇವೆ ಎಂದರೆ ಸರಿ. ನಿಪಿ-3 ದಾಖಲೆಯಲ್ಲಿ ಕೆಲವು ವ್ಯಕ್ತಿಗಳ ಸಹಿಗಳು ಇವೆ, ಇನ್ನೂ ಕೆಲವು ವ್ಯಕ್ತಿಗಳ ಸಹಿ ಇಲ್ಲ ಎಂದರೆ ಸರಿ. ನಾವು ಲಾಡ್ಜ್‌ಗೆ ಬಂದವರ ಐ.ಡಿ ಪ್ರೂಫ್ ಪಡೆಯುತ್ತೇವೆ, ಆದರೆ ಫೋಟೋ ಪಡೆಯುವುದಿಲ್ಲ. ಆ ದಿನ ಡಿ.ಎಲ್ ನ ಫೋಟೋ ನೋಡಿ ದಾಖಲು ಮಾಡಿದೆವು. ಆದರೆ ಪ್ರತಿ ಪಡೆಯಲಿಲ್ಲ. ರಂಗನಾಥ ದಾಖಲೆ ಬರೆಯುವಾಗ ಐ.ಡಿ ಪ್ರೂಫ್ ಪಡೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆತನ ಡಿ.ಎಲ್ ನಂಬರ್ ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-3 ದಾಖಲೆಯನ್ನು ಬರೆಯಲು ಆರಂಭಿಸಿದಾಗ ಮಾಲೀಕರ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-3 ದಾಖಲೆಯಲ್ಲಿ ಕೆಲವು ವ್ಯಕ್ತಿಗಳು ಸಹಿ ಮಾಡಿದ್ದಾರೆ ಮತ್ತು ಕೆಲವರು ಮಾಡಿಲ್ಲ ಎಂದರೆ ಸರಿ. ನಿಪಿ-3 ರ ಪುಟ ಸಂಃ 26 ರಲ್ಲಿ 4 ನೇ ಕಾಲಂ ಹಾಗೂ ಪುಟ ಸಂಃ 28 ರಲ್ಲಿ 3 ನೇ ಕಾಲಂನಲ್ಲಿ ನಮೂದಿಸಿದ ರಂಗನಾಥ ಎಂಬ ವ್ಯಕ್ತಿಯ ಹಸ್ತಾಕ್ಷರಗಳು ಬೇರೆ ಬೇರೆಯಾಗಿವೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರೇ ಬರೆದಿದ್ದಾರೆ

ಎಂದು ನುಡಿಯುತ್ತಾರೆ. ಸದರಿ ಎರಡೂ ದಾಖಲಾತಿಗಳನ್ನು ರಂಗನಾಥ ಎಂಬ ವ್ಯಕ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ದಾಖಲೆ ನಮ್ಮ ಲಾಡ್ಜ್ ಗೆ ಸಂಬಂಧವಿಲ್ಲದೇ ಇದ್ದರೂ ಪೋಲಿಸರೊಂದಿಗೆ ಶರೀಖಾಗಿ ಸೃಷ್ಟಿ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಲಾಡ್ಜ್ ನಲ್ಲಿ ಸಿ.ಸಿ ಕ್ಯಾಮಾರಾ ಅಳವಡಿಸಿಲ್ಲ ಎಂದರೆ ಸರಿ. ನಮ್ಮ ಲಾಡ್ಜ್ ನಲ್ಲಿದ್ದ ವ್ಯಕ್ತಿಗಳನ್ನು ಬೆಳಗಿನ ಜಾವ ಕರೆದುಕೊಂಡು ಹೋದ ಬಗ್ಗೆ ನಾನು ಚನ್ನರಾಯಪಟ್ಟಣ ಠಾಣೆಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ಮಾಹಿತಿ ನೀಡಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ, ಬೆಳಗಿನ ಜಾವ 5-00 ಗಂಟೆ ಸುಮಾರಿಗೆ ನಾವು ಮಲಗಿರುತ್ತೇವೆ ಎಂದರೆ ಸರಿ.

ಆ ದಿನ ನಾನು ರೂಮ್ ನಂಬರ್ 101 ನೇದ್ದರಲ್ಲಿ ಮಲಗಿದ್ದೆನು. ರೂಮ್ ಬಾಯ್ ಸ್ಟಾಫ್ ರೂಮಿನಲ್ಲಿ ಮಲಗಿದ್ದನು. ಲಾಡ್ಜ್‌ನ ಮುಖ್ಯ ಬಾಗಿಲು ಮುಚ್ಚಿರುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಅರ್ಧ ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಲಾಡ್ಜ್ ನ ಬಾಗಿಲುಗಳು 24 ಗಂಟೆಗಳ ಕಾಲ ತೆಗೆದಿರುತ್ತದೆ ಎಂದರೆ ಸರಿ. ಸೆಕ್ಯೂರಿಟಿ ಗಾರ್ಡ್ ಮುಖ್ಯ ಬಾಗಿಲಿನಲ್ಲಿ ಇರಲಿಲ್ಲ. ಒಟ್ಟು 40 ಕೋಣೆಗಳು ಲಾಡ್ಜ್ ನಲ್ಲಿ ಇದ್ದವು.

ಆ ದಿನ ಅವರು ಬಿಟ್ಟು ಹೋದ ಮೇಲೆ ಕೋಣೆಯಲ್ಲಿ ಏನಾದರೂ ಸಾಮಾನುಗಳನ್ನು ಬಿಟ್ಟು ಹೋಗಿದ್ದಾರಾ ಎಂದು ನಾನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಅವರು ಏನೇನು ಲಗೇಜ್ ತಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಇನ್ನೊಂದು ರೂಮ್ ನಲ್ಲಿ ಏನೇನು ಸಾಮಾನುಗಳು ಇದ್ದವು ಎಂದು ನಾನು ನೋಡಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ನಮ್ಮ ಲಾಡ್ಜ್ ಗೆ ಒಂದು ದಿನಕ್ಕೆ 50, 60, 70, 80, 90, 100 ಜನ ಬಂದು ಹೋಗುತ್ತಾರೆ ಎಂದರೆ ಸರಿ. ಅವರೆಲ್ಲರನ್ನು ನಾನು ನೆನಪಿಟ್ಟುಕೊಳ್ಳಲು

ಬರುವುದಿಲ್ಲ ಎಂದರೆ ಸರಿ. ಪೋಲಿಸರು ಕೇಳಿದಾಗ ಮುಖ ಪರಿಚಯವಿಲ್ಲದರಿಂದ ಇವರೇ ಎಂದು ಹೇಳಲು ಬರುವುದಿಲ್ಲ ಎಂದು ಹೇಳಿದ್ದೇನೆ. ಅದೇ ರೀತಿ ನಮ್ಮ ಲಾಡ್ಜ್ ನಲ್ಲಿ ಉಳಿದುಕೊಂಡಿದ್ದ ವ್ಯಕ್ತಿಗಳ ಮುಖ ಪರಿಚಯ ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ರಂಗನಾಥ ಎಂಬ ವ್ಯಕ್ತಿಯ ಮುಖ ಸಹ ನನಗೆ ಗುರುತಿಸಲು ಬರುವುದಿಲ್ಲ ಎಂದರೆ ಸರಿ. ಪೋಲಿಸರು ಲಾಡ್ಜ್ ಗೆ ಬಂದ ದಿನಾಂಕ ಗೊತ್ತಿಲ್ಲ. ನಾನು ಅದೇ ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಐ.ಡಿ ಪ್ರೂಫ್ ವಗೈರೆ ಕೊಟ್ಟಿಲ್ಲ ಎಂದರೆ ಸರಿ. ಅದೇ ರೀತಿ, ಸದರಿ ಲಾಡ್ಜ್‌ನಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂಬ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿ. ಆ ದಿನ ಅಲ್ಲಿ ಯಾವುದೇ ಗಲಾಟೆಯಾಗದೇ ಇದ್ದುದರಿಂದ ನಾನು ಅದರ ಬಗ್ಗೆ ನನ್ನ ಸಾಹುಕಾರರಿಗೆ ಯಾವುದೇ ವಿಷಯ ಹೇಳಲಿಲ್ಲ ಎಂದರೆ ಸರಿ. ನನಗೆ ಎಷ್ಟು ಎಷ್ಟು ಮಹಜರುಗಳನ್ನು ಎಷ್ಟು ಸಮಯಕ್ಕೆ ಬರೆದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಅವುಗಳಲ್ಲಿ ಎಷ್ಟು ಪುಟ ಬರೆದರು ಮತ್ತು ಏನೇನು ಬರೆದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸ್ವಿಫ್ಟ್ ಕಾರು ಎಷ್ಟು ದಿನಗಳವರೆಗೆ ಇತ್ತು ಹಾಗೂ ಅದರ ನಂಬರ್ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಪೋಲಿಸರು ಆ ಸ್ವಿಫ್ಟ್ ಕಾರ್ ಬಗ್ಗೆ ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದರೆ ಸರಿ. ನಾನು ಯಾವುದೇ ದಿನ ಕೊರಟಗೆರೆ ಪೋಲಿಸ್ ಠಾಣೆಗೆ ಬಂದಿರಲಿಲ್ಲ ಎಂದರೆ ಸರಿ. ನಾನು ಪೋಲಿಸರ ಮುಂದೆ ಕಾರು ಅಮಾನತ್ತು ಮಾಡಿಕೊಳ್ಳುವ ಬಗ್ಗೆ ಹಾಗೂ ಆರೋಪಿತರು ಲಾಡ್ಜ್‌ಗೆ ಬಂದ ಬಗ್ಗೆ ಹಾಗೂ ನಿಪಿ-3 ದಾಖಲೆ ಹಾಜರುಪಡಿಸಿದ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ರೂಮಿನಲ್ಲಿ ಮಲಗಿದ್ದೆ, ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ, ಪೋಲಿಸರು ಕೇಳಿದ್ದರಿಂದ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನಾವು ಲಾಡ್ಜ್ ನಲ್ಲಿ ರೂಮ್ ಕೊಡುವಾಗ ಹಣ ಪಡೆಯುವ ಬಗ್ಗೆ ರಶೀದಿ ಪುಸ್ತಕ ಇಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಿಪಿ-3 ನೋಟ್ ಪುಸ್ತಕದಲ್ಲಿ ದಾಖಲಿಸುತ್ತೇವೆ

ಎಂದು ನುಡಿಯುತ್ತಾರೆ. ಆ ಮಹಜರುಗಳನ್ನು ಯಾರು ಬರೆದರು ಹಾಗೂ ಯಾರು ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಧುಗಿರಿ

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ** ಸದರಿ ವಿಚಾರವಾಗಿ ದಿನಾಂಕಃ 04-10-2020 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ “ದಿನಾಂಕಃ ರಂದು ...... ನೀಡಿರುತ್ತೇನೆಃ” ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ- ಎಂದು ಗುರುತಿಸಲಾಯಿತು. ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ನಿಪಿ-2 ರ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 28-11-2017 ರಂದು ಸಂಜೆ 4-00 ಗಂಟೆ ಸುಮಾರಿಗೆ ಚಾಸಾ-1 ಠಾಣೆಗೆ ಹಾಜರಾಗಿ ನಿಪಿ-1 ರಂತೆ ನೀಡಿದ ದೂರನ್ನು ಸ್ವೀಕರಿಸಿ ಗುನ್ನಾ ಸಂಃ 78/2017 ನೇದ್ದರಲ್ಲಿ ಪ್ರಕರಣ ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಸಾಕ್ಷಿಯು ನಿಪಿ-1 ರ ಮೇಲಿನ ಷರಾ ಹಾಗೂ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ರದಿಯ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಪ್ರ.ವ.ವರದಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-1 ರ ಮೇಲಿನ ಷರಾ ಹಾಗೂ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ರದಿಯ

ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಪ್ರ.ವ.ವರದಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.